ಸೆಲೆಬ್ರಿಟಿ
■ ಹನಿ

# ಮೆಗಾ ಕನಸುಗಳ ಚಕ್ರವರ್ತಿ!

ಭಾರತೀಯ ಸಿನಿಮಾ ರಂಗದಲ್ಲಿ ಹೊಸ ಸೂಪರ್‌ಸ್ಟಾರ್ ಒಬ್ಬರ ಉದಯವಾಗಿದೆ. ಆದರೆ ಆತ ನಟನಲ್ಲ; ನಿರ್ದೇಶಕ! ಕೊಡೂರಿ ಶ್ರೀಶೈಲ ಶ್ರೀ ರಾಜಮೌಳಿ ಈಗ ಎಲ್ಲೆಡೆ ಮನೆಮಾತು. ಯಾವುದೇ ಭಾರತೀಯ ಭಾಷೆಯ ಚಿತ್ರವೊಂದು ಹಿಂದಿ ಸಹಿತ ಎಲ್ಲ ಭಾಷೆಗಳ ಚಿತ್ರಗಳ ಬಾಕ್ಸಾಫೀಸ್ ದಾಖಲೆಗಳನ್ನು ಮುರಿದಿಕ್ಕುವುದೆಂದರೆ ಅದು ಸಾಮಾನ್ಯ ಸಾಧನೆಯಲ್ಲ. ಈ ಸಾಧನೆಯ ಸೂತ್ರಧಾರಿ ಚಂದ್ರಮೌಳಿ.

'ಬಾಹುಬಲಿ–2' ಸಿನಿಮಾ ಮೊದಲ ವಾರದ ಕೊನೆಗೆ ಮುರಿದಿಕ್ಕಿದ ದಾಖಲೆಗಳನ್ನು ನೋಡಿ ಹಾಲಿವುಡ್‌ನವರೂ ದಂಗಾಗಿದ್ದಾರೆ. 'ಬಾಹುಬಲಿ–2' ಮೊದಲ ದಿನದ ಕಲೆಕ್ಷನ್ 121 ಕೋಟಿ ರೂಪಾಯಿ! ಹಿಂದಿಯ ಬಾಹುಬಲಿ–2, ಮೊದಲ ದಿನ 41 ಕೋಟಿ ರೂಪಾಯಿ ಗಳಿಸಿ, ಅಮೀರ್‌ಖಾನ್‌ನ 'ದಂಗಲ್' ಮತ್ತು ಸಲ್ಮಾನ್‌ನ 'ಸುಲ್ತಾನ್' ಚಿತ್ರಗಳ ದಾಖಲೆಗಳನ್ನು ಹಿಂದಿಕ್ಕಿದೆ. ತಮಿಳಿನಲ್ಲಿ ರಜನಿಕಾಂತ್ ಅಭಿನಯದ 'ಕಬಾಲಿ'ಯ ಒಟ್ಟು ಗಳಿಕೆಯ ದಾಖಲೆಯನ್ನು 'ಬಾಹುಬಲಿ –2' ಆರೇ ದಿನದಲ್ಲಿ ಮುರಿದಿಕ್ಕಿದೆ. ಬಹುಭಾಷೆಗಳಲ್ಲಿ ಬಿಡುಗಡೆಯಾದ ಚಿತ್ರವೊಂದು ಹೀಗೆ ಎಲ್ಲ ಭಾಷೆಗಳಲ್ಲೂ ಇಂತಹ ಅದ್ಭುತ ಆರಂಭ ಕಂಡದ್ದು ಇಲ್ಲವೇ ಇಲ್ಲ. ಇದನ್ನು ಬರೆಯುವ ಹೊತ್ತಿಗೆ ಚಿತ್ರದ ಕಲೆಕ್ಷನ್ 700 ಕೋಟಿ ದಾಟಿದ್ದು, ಬಹುಶಃ ನೀವು ಓದುವ ಹೊತ್ತಿಗೆ ಸಾವಿರ ಕೋಟಿ ರೂಪಾಯಿ ದಾಟಿರುತ್ತದೆ.

ರಾಜಮೌಳಿಯ ಅಪ್ಪ ಕೆ.ವಿಜಯೇಂದ್ರ ಪ್ರಸಾದ್ ಸಿನಿಮಾ ಕಥೆಗಾರರು. ಹಾಗೆಂದೇ ಬಾಲ್ಯದಿಂದಲೂ ರಾಜಮೌಳಿಗೆ ಕಥೆ ಹೇಳುವ ಹುಚ್ಚು. ಜತೆಗೇ ಕುಳಿತು ನೋಡಿದ ಸಿನಿಮಾಗಳ ಕಥೆಯನ್ನು ಅದೇ ಗೆಳೆಯರಿಗೆ ಮತ್ತೆ ಮತ್ತೆ ವಿವರವಾಗಿ ಹೇಳುತ್ತಿದ್ದನಂತೆ. ಅಪ್ಪ– ಅಮ್ಮ ಮಹಾ ಶಿವಭಕ್ತರು. ಪ್ರತಿವರ್ಷ ಶಿವರಾತ್ರಿಯಂದು ಯಾವುದಾದರೊಂದು ಜ್ಯೋತಿರ್ಲಿಂಗ ದರ್ಶನ ಮಾಡುವವರು. ಹೀಗೆ ಶ್ರೀಶೈಲಕ್ಕೆ ಹೋಗಿ ಬಂದ ಅಮ್ಮನಿಗೆ ಕನಸು ಬಿತ್ತಂತೆ. ಬಳಿಕ ಹುಟ್ಟಿದ ಮಗುವಿಗೆ ಶ್ರೀಶೈಲ ಶ್ರೀರಾಜಮೌಳಿ ಎಂದೇ ಹೆಸರಿಟ್ಟರು.

'ಮಹಾಭಾರತ' ಓದುತ್ತಾ ಬೆಳೆದ ರಾಜಮೌಳಿಗೆ ಬೀಳುತ್ತಿದ್ದುದೆಲ್ಲ ಮೆಗಾ ಕನಸುಗಳೇ. ಯೌವನದಲ್ಲಿ ಚಂದ್ರಮೌಳಿ ಎಷ್ಟು ಧರ್ಮಭೀರುವೆಂದರೆ ಕಾಷಾಯ ವಸ್ತ್ರ ಧರಿಸುತ್ತಿದ್ದ! ಚರ್ಚೆಗೆ ಹೋಗುತ್ತಿದ್ದ!

ಗುಣ್ಣಂ ಗಂಗರಾಜು ಅವರ ಜತೆಗೆ ಸಿನಿಮಾ ಸಹಾಯಕನಾಗಿ ಕೆಲಸ ಮಾಡುತ್ತಿದ್ದಾಗ ಅವರು ನೀಡಿದ ಐನ್ ರ‍್ಯಾಂಡ್ ಬರೆದ 'ಫೌಂಟೇನ್ ಹೆಡ್' ಎನ್ನುವ ಪುಸ್ತಕ ರಾಜಮೌಳಿಯ ಜೀವನವನ್ನು ಬದಲಾಯಿಸಿತು. ಗಂಗರಾಜು ಅವರಂತೆ ಚಂದ್ರಮೌಳಿ ಕೂಡಾ ಯಾವ ಧರ್ಮವನ್ನೂ ಅನುಸರಿಸದ ನಾಸ್ತಿಕರಾದರು.

'ಬಾಹುಬಲಿ–2' ಒಮ್ಮಿಂದೊಮ್ಮೆಲೆ ಘಟಿಸಿದ ಅದ್ಭುತವಲ್ಲ. ಕೋಟಗಿರಿ ವೆಂಕಟೇಶ್ವರರಾವ್ ಅವರ ಜತೆ ಸಂಕಲನ ಸಹಾಯಕರಾಗಿ ಕೆಲಸ ಮಾಡುತ್ತಿದ್ದಾಗಲೇ 'ಈಗ' ದಂತಹ ಭ್ರಾಮಕ ಸಿನಿಮಾಗಳ ಐಡಿಯಾಗಳು ಚಂದ್ರಮೌಳಿ ತಲೆಯಲ್ಲಿ ಓಡುತ್ತಿದ್ದವು. ಪೌರಾಣಿಕ ಕಥೆಗಳ ಮೆಗಾಕನಸುಗಳು ತುಂಬಿಕೊಂಡಿದ್ದವು.

ರಾಜಮೌಳಿ ನಿಜವಾದ ಬಹುಭಾಷಾ ತಾರೆ. 2001ರಲ್ಲಿ ರಾಜಮೌಳಿ ನಿರ್ದೇಶಿಸಿದ ಮೊದಲ ಸಿನಿಮಾ 'ಸ್ಟೂಡೆಂಟ್ ನಂ.1' ಜೂನಿಯರ್ ಎನ್‌ಟಿಆರ್ ಗೆ ಅದ್ಭುತ ಯಶಸ್ಸು ತಂದುಕೊಟ್ಟಿತು. 2 ವರ್ಷ ಬಳಿಕ ಬಂದ 'ಸಿಂಹಾದ್ರಿ' ಬಾಕ್ಸಾಫೀಸ್ ಪುಡಿಗಟ್ಟಿತು. 'ಈಗ' ಅಂತೂ ಅಂತರರಾಷ್ಟ್ರೀಯ ಖ್ಯಾತಿಗೇರಿಸಿತು. 'ವಿಕ್ರಮಾರ್ಕುಡು' ಎನ್ನುವ ತೆಲುಗು ಚಿತ್ರ ಆಂಧ್ರದಲ್ಲಿ ಇನ್ನಿಲ್ಲದಂತೆ ದುಡ್ಡು ದೋಚಿದಾಗ ಬಹುತೇಕ ಭಾರತೀಯ ಭಾಷೆಗಳ ಹೀರೋಗಳು ಹೈದರಾಬಾದಿಗೆ ದೌಡಾಯಿಸಿದ್ದರು. ಅದೇ ಸಿನಿಮಾ ಹಿಂದಿಯಲ್ಲಿ 'ರೌಡಿ ರಾಠೋರ್', ತಮಿಳಿನಲ್ಲಿ 'ಸಿರುತ್ತೈ', ಕನ್ನಡದಲ್ಲಿ 'ವೀರಮದಕರಿ', ಬಂಗಾಳಿಯ ಮೂರು ಪ್ರಭೇಧಗಳಲ್ಲಿ 'ಬಿಕ್ರಂಸಿಂಘಾ' ಎಂದು ರಿಮೇಕ್ ಆಯಿತು. ಜತೆಗೆ ಹಿಂದಿ, ಭೋಜಪುರಿ, ಮಲಯಾಳಂ ಗೆ ಡಬ್ ಆಗಿ ದುಡ್ಡು ಬಾಚಿತು! ರಾಜಮೌಳಿ ನಿರ್ದೇಶಿಸಿದ 'ಮರ್ಯಾದಾ ರಾಮಣ್ಣ' ಎನ್ನುವ ತೆಲುಗು ಚಿತ್ರ, ಹಿಂದಿಯಲ್ಲಿ 'ಸನ್ ಆಫ್ ಸರ್ದಾರ್' ರಿಮೇಕ್ ಆಗಿ ಬಾಕ್ಸಾಫೀಸ್ ದಾಖಲೆ ನಿರ್ಮಿಸಿತು! ಜತೆಗೆ ತಮಿಳು, ಮಲಯಾಳಂ, ಬಂಗಾಳಿ, ಕನ್ನಡದಲ್ಲೂ ರಿಮೇಕ್ ಯಶಸ್ಸು ಪಡೆಯಿತು. ರಗ್ಬಿ ಕ್ರೀಡೆಯನ್ನು ಇಟ್ಟುಕೊಂಡು ನಿರ್ದೇಶಿಸಿದ 'ಸೈ' ಎನ್ನುವ ಚಿತ್ರ ವಿಮರ್ಶಕರನ್ನೂ ಬೆರಗುಗೊಳಿಸಿತು. ವಿಶಿಷ್ಟ ಚಿತ್ರಕಥೆಯ 'ಈಗ' ಶಾಂಘಾಯ್, ಟೊರಾಂಟೊ, ಬ್ರೆಝಿಲ್ ಚಿತ್ರೋತ್ಸವಗಳಲ್ಲಿ ಪ್ರದರ್ಶನ ಕಂಡಿತು.

1957ರಲ್ಲಿ ತೆರೆಕಂಡ 'ಮಾಯಾಬಜಾರ್' ರಾಜಮೌಳಿಯ ಅಚ್ಚುಮೆಚ್ಚಿನ ಚಿತ್ರ. ಏಳನೇ ವಯಸ್ಸಿನಲ್ಲಿ ಆ ಚಿತ್ರವನ್ನು ಮೊದಲ ಬಾರಿಗೆ ನೋಡಿದ ಬಾಲಕ ಚಂದ್ರಮೌಳಿ, ಅದರ ಹುಚ್ಚಿನಿಂದ ಈಗಲೂ ಹೊರಬಂದಿಲ್ಲ ಎನ್ನುವಂತಿದೆ 'ಬಾಹುಬಲಿ'. ಎರಡು ವರ್ಷಗಳ ಅಂತರದಲ್ಲಿ ತೆರೆಗೆ ಬಂದ ಎರಡೂ 'ಬಾಹುಬಲಿ' ಚಿತ್ರಗಳು, ಈಗ ರಾಜಮೌಳಿಯನ್ನು ವಿಮರ್ಶಕರು ಅಂತರರಾಷ್ಟ್ರೀಯ ಖ್ಯಾತಿಯ ನಿರ್ದೇಶಕರಾದ ಸ್ಟೀವನ್ ಸ್ಪಿಲ್‌ಬರ್ಗ್ ಮತ್ತು ಜೇಮ್ಸ್ ಕ್ಯಾಮರೂನ್ ಅವರ ಜತೆ ಹೋಲಿಸಲು ಪ್ರೇರೇಪಿಸಿವೆ!



ಅಂದ ಹಾಗೆ, ರಾಜಮೌಳಿ ಹುಟ್ಟಿದ್ದು ರಾಯಚೂರಿನಲ್ಲಿ; ಬೆಳೆದದ್ದು ಆಂಧ್ರದ ಕೊವ್ವೂರಿನಲ್ಲಿ. ರಾಜಮೌಳಿಯ ಜತೆಗೆ ಕೆಲಸ ಮಾಡಲು ಆಗಲಿಲ್ಲವಲ್ಲ.. ಎಂದು ಈಗಲೂ ಹಲುಬುತ್ತಿರುವ ಇಬ್ಬರು ಖ್ಯಾತನಾಮರೆಂದರೆ ಮಲಯಾಳಂ ಸೂಪರ್‌ಸ್ಟಾರ್ ಮೋಹನ್‌ಲಾಲ್ ಮತ್ತು ಬಾಲಿವುಡ್ ಸುಂದರಿ ಶ್ರೀದೇವಿ! 2003ರಲ್ಲೇ ಮೋಹನ್‌ಲಾಲ್ ಅವರನ್ನು ಹೀರೊ ಆಗಿಸಿ ಪೌರಾಣಿಕ ಚಿತ್ರವೊಂದನ್ನು ನಿರ್ದೇಶಿಸುವ ಚಂದ್ರಮೌಳಿ ಪ್ರಯತ್ನ ಆರಂಭದಲ್ಲೇ ನಿಂತುಹೋಗಿತ್ತು. 'ಬಾಹುಬಲಿ' ಚಿತ್ರದಲ್ಲಿ ರಮ್ಯಕೃಷ್ಣ ವಹಿಸಿರುವ ಪಾತ್ರವನ್ನು ಶ್ರೀದೇವಿಗೆ ಕೊಡುವ ಚಂದ್ರಮೌಳಿಯ ಆಸೆಯೂ ಕೈಗೂಡಲಿಲ್ಲವಂತೆ! ■

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65